ನೋಟಿಸ್.

ತಾರೀಖು 29ನೇ ಜನವರಿ 1903ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ :—ಹಾಸನ ಡಿಸ್ಟ್ರಿಕ್ಟ್ ಅರಿಸೀಕೆರೆ ರೇಂಜ್ ಫಾರೆಸ್ಟ್ ಆಫಿಸರವರ ಲೆಖ್ಖದಲ್ಲಿ ಈ ರೇಂಜ್ ಬಾಬತು ಮಾರ್ಜಿನ್ನಿನಲ್ಲಿ ಕಂಡ ಹೆಸರಿನ ನಾಕರರ ಹಲಬು ರೂ. 3—11—11 ಪಾವತೀ ಇಲ್ಲದೇ ಬಾಕೀಯಲ್ಲಿರುವಂತೆ ತಿಳಿ ಯಬಂದಿರುತ್ತೆ ಯಾಗಿ ಈ ಲಾಗಾ ಯಿತು ಬಂದು ತಿಂಗಳು ವಾಯಿ ದೆಯಲ್ಲಿ ಈ ತಲಬಿಗೆ ಇರತಕ್ಕ ಹಕ್ಕನ್ನು ತಿಳಿಯಪಡಿಸದೇ ಇರುವ ಭಾಗದಲ್ಲಿ ಸದರೀ ಮೊಬಲಗನ್ನು ಸರ್ಕಾರಕ್ಕೆ ಆರ್ಯ ಜಮೆಗೆ ತಂದುಕೊಳ್ಳುವದರಲ್ಲಿ ಬರುತ್ತೆ. ತಿಳಿಯುವದು.

ಹೆಸರು.	ಮಾಹೆ.	ಮೊಬಲಗು.
ಕರಿಯಾ	1902ನೇ ಆಗಸ್ಟ್	2—15—0
ನಂಜಾ	1900ನೇ ಅಕ್ಟೋಬರ್	0—12—11
ಅಂತು ...		3—11—11

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟ್.

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ಬೆಂಗಳೂರ್, ತಾರೀಖು 2ನೇ ಫೆಬ್ರವರಿ 1903.

ಸರ್ವಿಸ್ ರಿಜಿಸ್ಟ್ರರ್‌ಗಳು ಈಗತಾನೆ ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್‌ನಿಂದ ತಲ್ಪಿರುವದ್ದರಿಂದ ಪ್ರತಿ ಬಂದಕ್ಕೆ ಅರ್ಧಾಣೆ ಮೇರೆ ಹಾಲಿ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋವಿನಲ್ಲಿ ಮಾರಾಟಕ್ಕೆ ಸಿದ್ಧವಾಗಿರುತ್ತೆಂದು ಇದರಿಂದ ಪ್ರಸಿದ್ಧಪಡಿಸಿದೆ.

ನೋಟಿಸ್. ಬೆಂಗಳೂರು, ತಾರೀಖು 7ನೇ ಫೆಬ್ರವರಿ 1903.

1903ನೇ ಇಸವಿ ಲೋವರ್ ಸೆಕಂಡರೀ ಪರೀಕ್ಷೆಗೆ ನೇಮಕವಾಗಿರುವ ಹೊಸ ಪದ್ಯಸಾರವು (Iನೇ ಭಾಗ) ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್‌ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿರುತ್ತೆ. ಅದರ ಖರೀದಿ ಪ್ರತಿ 1ಕ್ಕೆ 5 ಆಣೆಗಳು.

ಎಸ್. ಅಬ್ದುಲ್ ಹೈ,
ಕ್ಯೂರೇಟರ್.